

ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳಬಹುದು.

**ಡಾ.ವಿನೋದ ಛಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

ಮಹಿಳೆ ವಯಸ್ಸು 56. ಒಬ್ಬಳೇ ಮಗಳು (22) ಮದುವೆಯಾಗಿದೆ. ಇತ್ತೀಚೆಗೆ ಅವಳಿಗೆ ಅಬಾರ್ಷನ್ ಆದಾಗ ವೈದ್ಯರು ಒಂದೆರಡು ವರ್ಷ ಸಂಭೋಗ ಬೇಡ ಎಂದಿದ್ದಾರೆ. ಮಗಳು ಆಸ್ಪತ್ರೆಯಲ್ಲಿದ್ದಾಗ ಅಳಿಯ (26) ಕೇಳಿಕೊಂಡಿದ್ದರಿಂದ ಅವರಿಗೆ ಮೈ ಉಜ್ಜಿ ಸ್ನಾನ ಮಾಡಿಸಿದೆ. ಆಗ ಅವರು ತಮಗೆ ದಪ್ಪ ಹೆಂಗಸೆಂದರೆ ಇಷ್ಟವೆಂದೂ, ಅಭ್ಯಂತರ ಇಲ್ಲದಿದ್ದರೆ ನನ್ನ ಜೊತೆಗೆ ಮಲಗುತ್ತೇನೆಂದೂ, ಇದಕ್ಕೆ ನನ್ನ ಮಗಳ ಅಭ್ಯಂತರ ಇಲ್ಲವೆಂದೂ ಹೇಳಿದರು. ನನಗೆ ಗಾಬರಿಯಾಗಿ ಪತಿಗೆ ಹೇಳಿ, ಇಬ್ಬರೂ ಮಗಳನ್ನು ವಿಚಾರಿಸಿದಾಗ ಅವಳು ತನ್ನ ಗಂಡನದು ಮಗುವಿನ ಮನಸ್ಸೆಂದೂ, ತನ್ನಲ್ಲಿ ಸಿಗದಿರುವ ಸುಖ ನನ್ನಿಂದ ಸಿಕ್ಕರೆ ಅದಕ್ಕೆ ಅಭ್ಯಂತರವಿಲ್ಲವೆಂದೂ ತಿಳಿಸಿದಳು. ನಾವಿಬ್ಬರೂ ಬಹಳ ಚರ್ಚಿಸಿದೆವು. ಒಬ್ಬಳೇ ಮಗಳ ಜೀವನಕ್ಕೆ ತೊಂದರೆಯಾಗಬಾರದೆಂದು ನಾನು ಮನಸ್ಸಿಲ್ಲದಿದ್ದರೂ ಒಪ್ಪಿಕೊಂಡೆ. ನಮ್ಮ ಅಳಿಯನದು ವಿಚಿತ್ರ ಬಯಕೆ ಅನ್ನಿಸುತ್ತದೆ. ನಗ್ನವಾಗಿ ತೊಡೆಗಳ ಮೇಲೆ ಮಲಗಿಸಿಕೊಂಡು ಮೊಲೆ ಉಣಿಸಲು, ಶಿಶ್ನವನ್ನು ಬಾಯಲ್ಲಿಟ್ಟುಕೊಂಡು ಚೀಪಲು ಕೇಳುತ್ತಾರೆ. ಸಂಭೋಗಿಸುವಾಗ ಅಂಟಿ ನೋವಾಗುತ್ತದೆಯೇ ಎಂದು ಪದೇ ಪದೇ ಕೇಳುತ್ತಾರೆ. ಹಲವು ಸಲ ನನ್ನ ಎದೆಯ ಮೇಲೆ ಮಲಗಿ ಮಗುವಿನಂತೆ ನಿದ್ರಿಸುತ್ತಾರೆ. ನನ್ನ ಗಂಡನಿಗೆ ಹೇಳಿದಾಗ ಮನೋವೈದ್ಯರಲ್ಲಿ ತೋರಿಸಬೇಕು ಅನ್ನುತ್ತಾರೆ. ದಯವಿಟ್ಟು ಪರಿಹಾರ ತಿಳಿಸಿ.

ಈ ಪ್ರಸಂಗದಲ್ಲಿ ಪ್ರತಿಯೊಬ್ಬರಲ್ಲೂ ಮತ್ತು ಪ್ರತಿ ಹಂತದಲ್ಲೂ ಬುದ್ಧಿ–ವಿವೇಚನೆ– ತರ್ಕ ದಾರಿ ತಪ್ಪಿದೆ. ಉದಾಹರಣೆಗೆ, 1) ಮಹಿಳಾ ವೈದ್ಯರು: ಸಂಭೋಗ ಬೇಡವೆನ್ನುವುದರ ಬದಲು ಗರ್ಭಧಾರಣೆ ಸದ್ಯಕ್ಕೆ ಬೇಡವೆಂದು ಸ್ಪಷ್ಟಪಡಿಸಬಹುದಿತ್ತು. ಸಂಭೋಗದಿಂದ ಗರ್ಭಕೋಶಕ್ಕೆ ತೊಂದರೆ ಆಗುತ್ತದೆ ಎಂದು ಅನೇಕರು ತಪ್ಪು ತಿಳಿಯುತ್ತಾರೆ. ಅಲ್ಲದೆ ಗರ್ಭನಿರೋಧ ಕ್ರಮಗಳ ಬಗೆಗೆ ಮಾಹಿತಿ ಕೊಡಬಹುದಿತ್ತು. 2) ಮಗಳು: ವೈದ್ಯರು ಗರ್ಭಧಾರಣೆ ಬೇಡವೆಂದಾಗ ಸಂಭೋಗವೇ ನಿಷೇಧವೆಂದು ತಪ್ಪು ತಿಳಿದಿರಬಹುದು. ಸಂಭೋಗ ಇಲ್ಲದಿದ್ದಲ್ಲಿ ಮುಖಮೈಥುನ, ಪರಸ್ಪರ ಹಸ್ತಮೈಥುನದಿಂದ ತೃಪ್ತಿ ಪಡಿಸಬಹುದಿತ್ತು. 3) ನಿಮ್ಮ ಪತಿ: ಒಬ್ಬಳೇ ಮಗಳ ಜೀವನಕ್ಕೆ ತೊಂದರೆ ಆಗುತ್ತದೆ ಎಂಬುದನ್ನು ಯಾವ ಆಧಾರದ ಮೇಲೆ ನಿರ್ಧರಿಸಿದರು? ಗರ್ಭಪಾತವಾದ ಹೆಚ್ಚಿನ ಮಹಿಳೆಯರ ಗಂಡಂದಿರು ಇತರ ಹೆಣ್ಣಿನ ಸಹವಾಸ ಇಟ್ಟುಕೊಂಡಿದ್ದಾರೆಯೆ? 4) ನೀವು: ಮಗಳು ಒಪ್ಪಿದರೂ ನೀವು ಒಪ್ಪುವ ಅಗತ್ಯವೇನಿತ್ತು? ನೀವೇ ಮಹಿಳಾ ವೈದ್ಯರ ಹತ್ತಿರ ಇನ್ನೊಂದು ಸಲ ಮಾತಾಡಬಹುದಿತ್ತಲ್ಲವೆ? ಹೋಗಲಿ, ಅಳಿಯನ ಕಾಮಾಭಿಲಾಷೆಯನ್ನು ಹೆಂಡತಿ ಮನೆಗೆ ಬರುವ ತನಕ ತಡೆದುಕೊಳ್ಳಲು ಬುದ್ಧಿ ಹೇಳಬಹುದಿತ್ತಲ್ಲವೆ? ಅಳಿಯನದು ಮಗುವಿನ ಸ್ವಭಾವವಿದ್ದರೆ ನೀವೇಕೆ ತಾಯಿಯ ಸ್ಥಾನದಲ್ಲಿ ನಿಂತು ಉಪದೇಶಿಸಲಿಲ್ಲ? 5) ಅಳಿಯ: ದಪ್ಪ ಹೆಂಗಸರನ್ನು ಕಂಡರೆ ಇಷ್ಟವಾಗುವವನು ಅಂಥವಳನ್ನೇ ಮದುವೆಯಾಗಬಹುದಿತ್ತು; ತೆಳ್ಳಗಿರುವವಳನ್ನು ಯಾಕೆ ಮದುವೆಯಾದ? ಹೆಂಡತಿ ಆಸ್ಪತ್ರೆಯಿಂದ ಮರಳುವ ತನಕ ಯಾಕೆ ಕಾಯಲಿಕ್ಕಾಗಲಿಲ್ಲ? ಮಗುವಿನ ಸ್ವಭಾವವಿದ್ದರೆ ನಿಮ್ಮನ್ನು ತನ್ನ ತಾಯಿಯ ಸ್ಥಾನದಲ್ಲಿ ಕಲ್ಪಿಸಿಕೊಂಡು ಅಚ್ಚಮಗನಾಗಿ ವರ್ತಿಸಬಹುದಿತ್ತು. ಸಂಭೋಗದ ಆಲೋಚನೆ ಆತನಿಗೆ ಹೇಗೆ ಬಂತು? ಇನ್ನು, ಈ ವ್ಯವಸ್ಥೆಯ ಪರಿಣಾಮ ಹಾಗೂ ಅದರಿಂದ ಹುಟ್ಟುವ ಸಮಸ್ಯೆಗಳು: 1) ನಿಮ್ಮ ದಪ್ಪ ಶರೀರಸುಖದ ರುಚಿಕಂಡು ನಿಮ್ಮಳಿಯ ನಿಮಗೇ ಅಂಟಿಕೊಳ್ಳುವ ಸಂಭವವಿದೆ. ಆಗ ಏನು ಮಾಡುವಿರಿ? ತಾಯಿಮಗಳಿಬ್ಬರೂ ಆತನೊಡನೆ ಮಲಗುವಿರಾ? 2) ಅವನು ನಿಮಗೆ ಮಾತ್ರ ಅಂಟಿಕೊಳ್ಳುತ್ತ ಹೆಂಡತಿಯನ್ನು ನಿರಾಕರಿಸುವ ಸಂಭವವೂ ಇದೆ. ಆಗ ಅವನ ಜೊತೆ ಕಾಯಂ ಸಂಬಂಧವಿಟ್ಟುಕೊಳ್ಳುವಿರಾ? ಅಥವಾ ಮಗಳನ್ನು ದಪ್ಪ ಮಾಡಿ ಅವಳ ಆರೋಗ್ಯ ಹಾಳುಮಾಡುತ್ತೀರಾ? ಅಥವಾ ಇನ್ನೊಬ್ಬಳು ದಪ್ಪ ಹೆಣ್ಣನ್ನು ಅವನಿಗೆ ಕಟ್ಟುತ್ತೀರಾ? 3) ವ್ಯಾವಹಾರಿಕವಾಗಿ ಅವನ ಜೊತೆಗೆ ಯಾವ ಸ್ತರದಲ್ಲಿ ವರ್ತಿಸುವಿರಿ? ಅತ್ತೆ–ಅಳಿಯ ಅಥವಾ ಪ್ರೇಯಸಿ– ಪ್ರಿಯಕರ? 4) ಕ್ರಮೇಣ ನೀವೂ ಅಳಿಯನನ್ನು ಬಯಸುವ ಸಂಭವವಿದೆ. ಆಗ ಮಗಳಲ್ಲಿ ನಿಮ್ಮ ಬಗೆಗೆ ಮತ್ಸರ ಮೂಡಬಹುದು. ಮಗಳಿಗೆ ಪ್ರತಿಸ್ಪರ್ಧಿಯಾಗುವಿರಾ? ಮಗಳ ದಾಂಪತ್ಯ ಉಳಿಸಲು ಹೋಗಿ ಹಾಳುಮಾಡಿದಂತೆ ಆಗುವುದಿಲ್ಲವೆ? ಇನ್ನು ಪರಿಹಾರ: 1) ಈ ಕ್ಷಣದಿಂದಲೇ ನಿಮ್ಮ ಅತ್ತೆ–ಅಳಿಯನ ಸಂಬಂಧಕ್ಕೆ ನಿಷೇಧ ಹಾಕಿ. ಪತಿಯೊಡನೆ ಅವನನ್ನು (ದೂರದಲ್ಲಿ) ಕೂಡಿಸಿಕೊಂಡು ತಿಳಿಹೇಳಿ. ಆತನದು ಎಷ್ಟೊಂದು ಮಗುವಿನ ಸ್ವಭಾವವೆಂದರೆ ತಾಯಿಯ ಸ್ಥಾನದ ಅತ್ತೆಗೂ ಹೆಂಡತಿಗೂ ವ್ಯತ್ಯಾಸ ಅರಿವಾಗುತ್ತಿಲ್ಲವೆಂಬುದನ್ನು ಸ್ಪಷ್ಟಪಡಿಸಿ. ಸಮಸ್ಯೆ ಗಂಭೀರವಾಗಿದ್ದು, ಇಡೀ ಕುಟುಂಬಕ್ಕೆ ಚಿಕಿತ್ಸೆ ಬೇಕು. ಮಗಳು–ಅಳಿಯನಿಗೆ ದಾಂಪತ್ಯ ಚಿಕಿತ್ಸೆ, ಹಾಗೂ ಅಳಿಯನಿಗೆ ಮನೋಚಿಕಿತ್ಸೆ ಬೇಕೇಬೇಕು. ಅದಕ್ಕಾಗಿ ಎಲ್ಲರೂ ಮನೋಲೈಂಗಿಕ ತಜ್ಞರನ್ನು ಕಾಣುವ ಅಗತ್ಯವಿದೆ. ಸಹಾಯಕ್ಕಾಗಿ ಬೆಂಗಳೂರಿನ ಮೆಡಿಸೆಕ್ಸ್ ಫೌಂಡೇಶನ್ ಸಂಸ್ಥೆಯನ್ನು (ದೂ.23101205, 23111666) ಸಂಪರ್ಕಿಸಿ. ಮಹಿಳಾ ವೈದ್ಯರಿಗೊಂದು ಸಲಹೆ: ಗರ್ಭಧಾರಣೆ ಬೇಡವೆಂದು ಸಲಹೆ ಕೊಡುವುದರ ಜತೆಗೆ ಗರ್ಭ ನಿರೋಧದ ಕ್ರಮಗಳನ್ನೂ ಹೇಳಿಕೊಟ್ಟರೆ ಇಂಥ ಅನಾಹುತಗಳಿಂದ ಪಾರುಮಾಡಿದ ಪುಣ್ಯ ನಿಮಗೆ ಬಂದೀತು!

## ಓದುಗರಿಗೆ ಒಂದು ಮಾತು

ಸುಖೀಭವ ಪ್ರಾರಂಭವಾಗಿ ಹತ್ತು ವರ್ಷಗಳ ಮೇಲಾಯಿತು. ಈ ದಶಕದಾದ್ಯಂತ ನೀವೆಲ್ಲ ನಿಮ್ಮ ಮಾನಸಿಕ, ಲೈಂಗಿಕ, ದಾಂಪತ್ಯ ಹಾಗೂ ಪಾರಸ್ಪರಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಅಸಂಖ್ಯಾತ ಸಮಸ್ಯೆಗಳನ್ನು ನನ್ನ ಮುಂದಿಟ್ಟಿದ್ದೀರಿ. ಅವುಗಳಿಗೆ ನಾನು ನನಗೆ ತಿಳಿದಂತೆ ಪರಿಹಾರ ಸೂಚಿಸಿದ್ದೇನೆ. ಲೈಂಗಿಕ ಸಮಸ್ಯೆಗಳು ಬಚ್ಚಿಡುವಂಥದ್ದಲ್ಲ, ಹಸ್ತಮೈಥುನದಿಂದ ಹಾನಿಯಿಲ್ಲ, ಎಂಥ ಲೈಂಗಿಕ ಸಮಸ್ಯೆಗೂ ಪರಿಹಾರ ಇದ್ದೇ ಇದೆ, ಲೈಂಗಿಕ ಸಮಸ್ಯೆಗಳನ್ನು ವೈದ್ಯಕೀಯ ದೃಷ್ಟಿಕೋನದಿಂದ ನೋಡದೆ ವೈಯಕ್ತಿಕ ಹಾಗೂ ಪಾರಸ್ಪರಿಕ ದೃಷ್ಟಿಕೋನದಿಂದ ನೋಡುವುದನ್ನು ಕಲಿಯಬೇಕು, ಸಲಿಂಗಕಾಮ ಸಹಜ, ತಮ್ಮ ತಮ್ಮ ಲೈಂಗಿಕ ಜೀವನದ ಮೇಲೆ ಪ್ರತಿಯೊಬ್ಬರಿಗೂ ಹಕ್ಕಿದೆ, ಎಲ್ಲ ಲೈಂಗಿಕ ವರ್ತನೆಗೂ ಅದರದೇ ಆದ ಆಗುಹೋಗುಗಳಿವೆ, ಲೈಂಗಿಕತೆಯ ಶಿಕ್ಷಣದ ಸಂಸ್ಕಾರವನ್ನು ನೀಡಿದಲ್ಲಿ ಮಕ್ಕಳು ಉತ್ತಮ ಪ್ರಜೆಗಳಾಗುತ್ತಾರೆ, ನಮ್ಮ ಸಂಗಾತಿಯನ್ನು ಆರಿಸಿಕೊಳ್ಳುವಾಗ ಸಮಸ್ಯೆಗಳನ್ನೂ ಆರಿಸಿಕೊಳ್ಳುತ್ತೇವೆ, ಹೆಚ್ಚಿನ ವಿಚ್ಛೇದನಗಳ ಬಗೆಗಿನ ನಿರ್ಧಾರಗಳು ಅಕಾಲಿಕವಾಗಿರುತ್ತವೆ, ರೋಗಗ್ರಸ್ಥ ದಾಂಪತ್ಯಕ್ಕೂ ವೈಜ್ಞಾನಿಕ ಚಿಕಿತ್ಸೆಯಿದೆ, ಹುಟ್ಟುಸ್ವಭಾವವನ್ನು ಮನಸ್ಸು ಮಾಡಿದರೆ ಬದಲಾಯಿಸಬಹುದು, ಎಲ್ಲ ಸಂಬಂಧಗಳಿಗೂ ಅದರದೇ ಮೌಲ್ಯಗಳಿವೆ, ಸ್ವಂತಿಕೆ ಹಾಗೂ ಪರಾವಲಂಬನೆ ಇವೆರಡರ ನಡುವೆ ಸಮತ್ವವನ್ನು ಕಾಪಾಡಿಕೊಂಡು ಬರುವುದೇ ಸಂಬಂಧದ ಜೀವಾಳ, ಸ್ವಂತ ಅಸ್ತಿತ್ವಕ್ಕೆ ಅರ್ಥಹುಡುಕಿಕೊಂಡು ಹೊರಡುವುದೇ ಜೀವನದ ಗುರಿ – ಇತ್ಯಾದಿ ಸತ್ಯಗಳನ್ನು ಬೆಳಕಿಗೆ ತಂದಿದ್ದೇನೆ. ಇದು ನಿಮ್ಮ ಬದುಕಿನ ಮೇಲೆ ಕಿಂಚಿತ್ತಾದರೂ ಪ್ರಭಾವ ಬೀರಿದ್ದಲ್ಲಿ ನಾನು ಧನ್ಯ. ನಾನು ದೂರದಿಂದ ನೀಡಿದ ಅಪ್ತಸಲಹೆ–ಚಿಕಿತ್ಸೆಯಿಂದ ನೀವೆಷ್ಟು ಪ್ರಯೋಜನ ಪಡೆದಿರೋ ನನಗೆ ಗೊತ್ತಿಲ್ಲ, ಆದರೆ ನಿಮ್ಮೆಲ್ಲರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಬೆಳಕಿನಲ್ಲಿ ನಾನು ಸ್ವತಃ ಅನೇಕ ವಿಷಯಗಳನ್ನು ಕಲಿತಿದ್ದೇನೆ. ನನ್ನನ್ನು ನಾನೇ ಎದುರಿಸುತ್ತ, ನನ್ನ ದ್ವಂದ್ವಗಳನ್ನು ನಿರ್ವಹಿಸುತ್ತ ವೈಯಕ್ತಿಕವಾಗಿ ಉತ್ತಮ ಮನುಷ್ಯನಾಗಲು ಸಾಧ್ಯವಾಗಿದೆ. ನನ್ನಲ್ಲಿ ಉಂಟಾದ ಈ ಬದಲಾವಣೆಗೆ ನೀವೆಲ್ಲ ಕಾರಣ ಎಂದು ಅಭಿಮಾನದಿಂದ ತಿಳಿಸುತ್ತ ನಿಮ್ಮಿಂದ ಬೀಳ್ಕೊಡುಗೆ ಬಯಸುತ್ತಿದ್ದೇನೆ. ಅನಂತ ಧನ್ಯವಾದಗಳು. ಮತ್ತೊಮ್ಮೆ ಭೇಟಿಯಾಗೋಣ.

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿ; (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. www.medisex.org